## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. 100/2020

ಚಾಸಾ-19 ಫ್ರಾಸಾ-10

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 19-11-2025

| | | |
|---|---|---|
| ಹೆಸರು | : | ಮಹಾದೇವ |
| ತಂದೆಯ ಹೆಸರು | : | ಜಂಬಯ್ಯ |
| ವಯಸ್ಸು | : | 45 ವರ್ಷ |
| ಉದ್ಯೋಗ | : | P.I. |
| ವಾಸಸ್ಥಳ | : | ಜೆಸ್ಕಾಂ ರಾಯಚೂರು |

-: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-**

ದಿನಾಂಕಃ 10-10-2019 ರಿಂದ 10-01-2021 ರವರೆಗೆ ಅಫಜಲಪೂರ ವೃತ್ತ ನಿರೀಕ್ಷಕನಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 22-12-2019 ರಂದು ಚಾಸಾ 18 ರವರು ಪ್ರಕರಣ ದಾಖಲಾದ ಕುರಿತು ಮಾಹಿತಿ ನೀಡಿದ್ದು ಅದರಂತೆ ನಾನು ಠಾಣೆಗೆ ಭೇಟಿ ನೀಡಿ ಸದರಿಯವರಿಂದ ಕಡತಗಳನ್ನು ಪಡೆದುಕೊಂಡು ನಂತರ ಗಬ್ಬೂರು ಬಿ. ಆಸ್ಪತ್ರೆಗೆ ಭೇಟಿ ನೀಡಿ ಅದೇ ದಿನ ರಾತ್ರಿ ಅಂದರೆ ದಿಃ 23-12-2019 ರಂದು ಸುಮಾರು 2 ಗಂಟೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಮೃತನ ಶವಪಂಚನಾಮೆ ಮಾಡಿರುತ್ತೇನೆ. ಚಾಸಾ 15 ರವರನ್ನು ನಿಯೋಜಿಸಿ ಮೃತನ ಮರಣೋತ್ತರ ಪರೀಕ್ಷೆಯ ವರದಿಯನ್ನು ಪಡೆಯಲು ತಿಳಿಸಿರುತ್ತೇನೆ. ಅದೇ ದಿನ ಬೆಳಿಗ್ಗೆ 9-30 ಗಂಟೆಗೆ ಗುನ್ಹೆಸ್ಥಳಕ್ಕೆ ಭೇಟಿ ನೀಡಿ ಚಾಸಾ 9 ರವರು ತೋರಿಸಿದ ಗುನ್ಹೆಸ್ಥಳದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮ ಸಮಯ 9-30 ರಿಂದ 10-30 ರವರೆಗೆ ಗುನ್ಹೆಸ್ಥಳ ಪಂಚನಾಮೆ ಮಾಡಿ ಗುನ್ಹೆಸ್ಥಳದಲ್ಲಿದ್ದ ಎರಡು ಟ್ರಾಲಿಗಳಲ್ಲಿ ಕಬ್ಬು ತುಂಬಿದ್ದ ಟ್ರಾಕ್ಟರ ಇದ್ದು ಸದರಿ

ಟ್ರಾಕ್ಟರನಲ್ಲಿರುವ ಕಬ್ಬನ್ನು ಖಾಲಿಮಾಡಿ ಆ ನಂತರ ಠಾಣೆಗೆ ಹಾಜರುಪಡಿಸಲು ತಿಳಿಸಿರುತ್ತೇವೆ. ಅದೇ ದಿನ ಚಾಸಾ 6 ರಿಂದ 13 ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ 15 ರವರು ಮರಣೋತ್ತರ ಪರೀಕ್ಷೆ ವರದಿ ನೀಡಿರುತ್ತಾರೆ.

ದಿಃ 25-12-2019 ರಂದು ಆರೋಪಿತನು ಠಾಣೆಗೆ ಹಾಜರಾಗಿದ್ದು ಯೋಗ್ಯ ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಚಾಸಾ 1 ಮತ್ತು 6 ರಿಂದ 9 ರವರ ಮರುಹೇಳಿಕೆ ಪಡೆದಿರುತ್ತೇನೆ. ಚಾಸಾ 13 ರವರಿಂದ ಇಂಡೆಮನಿಟಿ ಬಾಂಡ ಪಡೆದು ಟ್ರಾಕ್ಟರ ಬಿಡುಗಡೆ ಮಾಡಿರುತ್ತೇನೆ. ದಿಃ 02-01-2020 ರಂದು ಮೃತನ PM ವರದಿ ಪಡೆದಿರುತ್ತೇನೆ. ದಿಃ 15-01-2020 ರಂದು IMV ವರದಿ ಪಡೆದಿರುತ್ತೇನೆ. ನಂತರ ತನಿಖೆ ಪೂರ್ಣಗೊಂಡಿದ್ದರಿಂದ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಶವಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಶವಪಂಚನಾಮೆಯನ್ನು ಈಗಾಗಲೇ ನಿಪಿ **4** ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ **4(**ಎ**)** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಗುನ್ಹೆಸ್ಥಳ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಗುನ್ಹೆಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ **3** ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ **3(**ಬಿ**)** ಎಂದು ಗುರುತಿಸಲಾಯಿತು.

ಸಾಕ್ಷಿಗೆ PM ವರದಿಯನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು PM ವರದಿಯನ್ನು ಈಗಾಗಲೇ ನಿಪಿ 5 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ **5(**ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಶವಪಂಚನಾಮೆ ಕಾಲಕ್ಕೆ ತೆಗೆಯಲಾಯಿತು ಎಂದು ಹೇಳುವ ಭಾವಚಿತ್ರವನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯೂ ಅದನ್ನು ನೋಡಿ ಗುರುತಿಸಿದ್ದು ಭಾವಚಿತ್ರವನ್ನು ನಿಪಿ **17** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಗುನ್ಹೆಸ್ಥಳದಲ್ಲಿ ತೆಗೆಯಲಾಯಿತು ಎಂದು ಹೇಳುವ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯೂ ಅವುಗಳನ್ನು ನೋಡಿ ಗುರುತಿಸಿದ್ದು ಭಾವಚಿತ್ರಗಳನ್ನು ನಿಪಿ **18** ಮತ್ತು **19** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಜಪ್ತಿ ಪಡಿಸಿಕೊಂಡರು ಎಂದು ಹೇಳುವ ವಾಹನದ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯೂ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ **14** ಮತ್ತು **15** ಎಂದು ಗುರುತಿಸಲಾಗಿದೆ.

ಸಾಕ್ಷಿಗೆ MVA ವರದಿ ಮತ್ತು ಇಂಡೆಮನಿಟಿ ಬಾಂಡಗಳನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, MVA ವರದಿ ಮತ್ತು ಇಂಡೆಮನಿಟಿ ಬಾಂಡಗಳನ್ನು ಈಗಾಗಲೇ ನಿಪಿ **6** ಮತ್ತು **7** ಎಂದು ಗುರುತಿಸಲಾಗಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**6**(ಎ) ಮತ್ತು ನಿಪಿ **7**(ಎ) ಎಂದು ಗುರುತಿಸಲಾಯಿತು. ಆರೋಪಿತನನ್ನು ನೋಡಿದಲ್ಲಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **SSP** ವಕೀಲರಿಂದಃ-</u>

ದಿಃ 22-12-2019 ರಂದು ಚಾಸಾ 18 ರವರು ಪ್ರಕರಣ ದಾಖಲಾದ ಕುರಿತು ಮಾಹಿತಿ ನೀಡಿದ್ದು ಅದರಂತೆ ನಾನು ಠಾಣೆಗೆ ಭೇಟಿ ನೀಡಿ ಸದರಿಯವರಿಂದ ಕಡತಗಳನ್ನು ಪಡೆದುಕೊಂಡು ನಂತರ ಗಬ್ಬೂರು ಬಿ. ಆಸ್ಪತ್ರೆಗೆ ಭೇಟಿ ನೀಡಿ ಅದೇ ದಿನ ರಾತ್ರಿ ಅಂದರೆ ದಿಃ 23-12-2019 ರಂದು ಸುಮಾರು 2 ಗಂಟೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಮೃತನ ಶವಪಂಚನಾಮೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 15 ರವರನ್ನು ನಿಯೋಜಿಸಿ ಮೃತನ ಮರಣೋತ್ತರ ಪರೀಕ್ಷೆಯ ವರದಿಯನ್ನು ಪಡೆಯಲು ತಿಳಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಬೆಳಿಗ್ಗೆ 9-30 ಗಂಟೆಗೆ ಗುನ್ಹೆಸ್ಥಳಕ್ಕೆ ಭೇಟಿ ನೀಡಿ ಚಾಸಾ 9 ರವರು ತೋರಿಸಿದ ಗುನ್ಹೆಸ್ಥಳದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮ ಸಮಯ 9-30 ರಿಂದ 10-30 ರವರೆಗೆ ಗುನೆಸ್ಥಳ ಪಂಚನಾಮೆ ಮಾಡಿ ಗುನೆಸ್ಥಳದಲ್ಲಿದ್ದ ಎರಡು ಟ್ರಾಲಿಗಳಲ್ಲಿ ಕಬ್ಬು ತುಂಬಿದ್ದ ಟ್ರಾಕ್ಟರ ಇದ್ದು ಸದರಿ ಟ್ರಾಕ್ಟರನಲ್ಲಿರುವ ಕಬ್ಬನ್ನು ಖಾಲಿಮಾಡಿ ಆ ನಂತರ ಠಾಣೆಗೆ ಹಾಜರುಪಡಿಸಲು ತಿಳಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಚಾಸಾ 6 ರಿಂದ 13 ರವರ ಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 15 ರವರು ಮರಣೋತ್ತರ ಪರೀಕ್ಷೆ ವರದಿ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 25-12-2019 ರಂದು ಆರೋಪಿತನು ಠಾಣೆಗೆ ಹಾಜರಾಗಿದ್ದು ಯೋಗ್ಯ ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ

ಚಾಸಾ 1 ಮತ್ತು 6 ರಿಂದ 9 ರವರ ಮರುಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 13 ರವರಿಂದ ಇಂಡೆಮನಿಟಿ ಬಾಂಡ ಪಡೆದು ಟ್ರ್ಯಾಕ್ಟರ ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 02-01-2020 ರಂದು ಮೃತನ PM ವರದಿ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 15-01-2020 ರಂದು IMV ವರದಿ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ತನಿಖೆ ಪೂರ್ಣಗೊಂಡಿದ್ದರಿಂದ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮೃತನ ಕುಟುಂಬಕ್ಕೆ ಸಹಾಯ ಮಾಡಲು ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - **ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ